**2ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ, ಹಾಸನ,**

**ಎಸ್.ಸಿ.ನಂಃ-167/2019**

ಪಿ.ಡಬ್ಲ್ಯೂಃ- 25

ಸಿ.ಡಬ್ಲ್ಯೂಃ-

| | | |
|---|---|---|
| ಸಾಕ್ಷಿದಾರರ ಹೆಸರುಃ | : | ಡಾಃ ಜೆ.ಶಂಕರಲಾಲ್ |
| ತಂದೆಯ ಹೆಸರುಃ | : | ಜುಗರಾಜ್ |
| ವಯಸ್ಸುಃ | : | 40 ವರ್ಷ |
| ವೃತ್ತಿಃ | : | ವೈದ್ಯಾಧಿಕಾರಿಗಳು, ಸರ್ಕಾರಿ ಆಸ್ಪತ್ರೆ, ಹಾಸನ |
| ವಾಸಃ | : | ಹಾಸನ. |

**ದಿನಾಂಕಃ 17-07-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ನಾನು 2017 ರಿಂದ ಹಾಸನದ ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದೇನೆ.

2. ದಿಃ02.01.2018 ರಂದು ಬೆಳಗಿನ ಜಾವ ಸುಮಾರು 1.30 ಗಂಟೆ ಸಮಯದಲ್ಲಿ ಗಾಯಾಳು ಲಕ್ಷ್ಮಿ ರವರು ಸುಟ್ಟ ಗಾಯಗಳೊಂದಿಗೆ ಹಿಮ್ಸ್ ನ ತುರ್ತು ಚಿಕಿತ್ಸಾ ಘಟಕಕ್ಕೆ ಚಿಕಿತ್ಸೆಗಾಗಿ ಬಂದಿದ್ದು ಗಾಯಾಳುವನ್ನು ಸುಟ್ಟ ಗಾಯಗಳಿಗೆ ಚಿಕಿತ್ಸೆ ನೀಡುವ ವಾರ್ಡ್ ನಂ.260ಕ್ಕೆ ದಾಖಲ್ಮಾಡಿಕೊಂಡು ಚಿಕಿತ್ಸೆ ಪ್ರಾರಂಭಿಸಲಾಗಿರುತ್ತದೆ.

ಗಾಯಾಳುವನ್ನು ಆಸ್ಪತ್ರೆಗೆ ಆಕೆಯ ಸಹೋದರನಾದ ಯೋಗೇಶ್ ಎಂಬುವವರು ಕರೆತಂದಿದ್ದರು. ದಿನಾಂಕಃ 02.01.2018 ರಂದು ಬೆಳಿಗ್ಗೆ 10 ರಿಂದ 11 ಗಂಟೆ ಸಮಯದಲ್ಲಿ ಹೊಳೇನರಸೀಪುರ ಗ್ರಾಮಾಂತರ ಪೊಲೀಸ್ ಠಾಣೆಯ ಎಎಸ್ಐ ರವರು ಆಸ್ಪತ್ರೆಗೆ ಭೇಟಿ ನೀಡಿ ಗಾಯಾಳು ಲಕ್ಷ್ಮಿ ರವರ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ಪಡೆದುಕೊಂಡಿರುತ್ತಾರೆ. ಗಾಯಾಳು ಹೇಳಿಕೆ ನೀಡಿದ ಕಾಲದಲ್ಲಿ ಪ್ರಜ್ಞಾವಸ್ಥೆಯಲ್ಲಿ ಮಾತನಾಡುವ ಸ್ಥಿತಿಯಲ್ಲಿದ್ದರು. ಗಾಯಾಳು ಲಕ್ಷ್ಮಿಯ ಬಲಗೈಗೆ ಸುಟ್ಟ ಗಾಯಗಳು ಆಗಿದ್ದ ಕಾರಣದಿಂದ ಗಾಯಾಳು ಆಕೆಯ ಹೇಳಿಕೆಗೆ ಆಕೆಯ ಎಡಗೈ ಹೆಬ್ಬೆಟ್ಟಿನ ಗುರುತನ್ನು ನನ್ನ ಸಮಕ್ಷಮದಲ್ಲಿ ಹಾಕಿರುತ್ತಾಳೆ. ನಿಪಿ-28 ಗಾಯಾಳು ಲಕ್ಷ್ಮಿ ರವರು ನೀಡಿದ ಹೇಳಿಕೆ ಆಗಿರುತ್ತದೆ ಎಂದು ಸಾಕ್ಷಿದಾರರು ಗುರುತಿಸಿರುತ್ತಾರೆ. ನಿಪಿ-28 ರಲ್ಲಿ ಗಾಯಾಳು ಲಕ್ಷ್ಮಿ ರವರ ಹೆಬ್ಬೆಟ್ಟಿನ ಗುರುತು ಇರುವುದಾಗಿ ಸಾಕ್ಷಿದಾರರು ಗುರುತಿಸಿರುತ್ತಾರೆ. ನಿಪಿ-28 ಗಾಯಾಳುವಿನ ಹೇಳಿಕೆಯನ್ನು ತನ್ನ ಸಮಕ್ಷಮದಲ್ಲಿ ಪಡೆದಿರುವ ಬಗ್ಗೆ ತಾನು ಸದರಿ ಹೇಳಿಕೆಯಲ್ಲಿ ತನ್ನ ಸಹಿ ಮಾಡಿರುವುದಾಗಿ ಸಾಕ್ಷಿದಾರರು ಗುರುತಿಸಿದ್ದು, ನಿಪಿ-28 ರಲ್ಲಿ ಸಾಕ್ಷಿದಾರರು ಗುರುತಿಸಿದ ಅವರ ಸಹಿಯನ್ನು ನಿಪಿ-28(ಸಿ) ಎಂದು ಗುರುತಿಸಲಾಯಿತು.

3. ದಿನಾಂಕಃ 02.01.2018 ರಂದು ಮಧ್ಯಾಹ್ನ 12.10 ಗಂಟೆ ಸಮಯದಲ್ಲಿ ಹಾಸನ ತಾಲ್ಲೂಕಿನ ತಹಶೀಲ್ದಾರ್ ರವರಾದ ಆರ್ ಬಿ ಶಿವಶಂಕರಪ್ಪ ರವರು ಗಾಯಾಳು ಲಕ್ಷ್ಮಿ ಚಿಕಿತ್ಸೆ ಪಡೆಯುತ್ತಿದ್ದ ವಾರ್ಡಿಗೆ ಆಕೆಯ ಮರಣ ಪೂರ್ವ ಹೇಳಿಕೆಯನ್ನು ದಾಖಲ್ಮಾಡಲು ಬಂದಿರುತ್ತಾರೆ. ತಹಶೀಲ್ದಾರ್ ರವರು ಗಾಯಾಳು ಲಕ್ಷ್ಮಿ ರವರು ಹೇಳಿಕೆ

ಕೊಡುವ ಸ್ಥಿತಿಯಲ್ಲಿರುತ್ತಾರೋ ಎಂದು ನನ್ನನ್ನು ವಿಚಾರಿಸಿದ್ದು, ನಾನು ಗಾಯಾಳು ಹೇಳಿಕೆ ಕೂಡವ ಸ್ಥಿತಿಯಲ್ಲಿ ಇರುತ್ತಾರೆಂದು ತಹಶೀಲ್ದಾರ್ ರವರಿಗೆ ಹೇಳಿರುತ್ತೇನೆ. ಗಾಯಾಳು ಲಕ್ಷ್ಮಿ ಪ್ರಜ್ಞಾವಸ್ಥೆಯಲ್ಲಿ ಹಾಗೂ ಉತ್ತಮ ಮನೋಸ್ಥಿತಿಯಲ್ಲಿದ್ದರು. ಗಾಯಾಳು ಲಕ್ಷ್ಮಿ ಮಾತನಾಡುವ ಸ್ಥಿತಿಯಲ್ಲಿ ಇದ್ದರು. ನಂತರ ಹಾಸನದ ತಾಲ್ಲೂಕಿನ ತಹಶೀಲ್ದಾರ್ ರವರು ನನ್ನ ಸಮಕ್ಷಮ ಗಾಯಾಳು ಲಕ್ಷ್ಮಿ ರವರ ಮರಣ ಪೂರ್ವ ಹೇಳಿಕೆಯನ್ನು ದಾಖಲ್ಮಾಡಿರುತ್ತಾರೆ. ಗಾಯಾಳು ಲಕ್ಷ್ಮಿಯ ಕೈಗಳಿಗೆ ಸುಟ್ಟ ಗಾಯಗಳು ಆಗಿದ್ದ ಕಾರಣದಿಂದ ಆಕೆಗೆ ಸಹಿ ಮಾಡಲು ಸಾಧ್ಯ ಆಗದೆ ಆಕೆ ಮರಣ ಪೂರ್ವ ಹೇಳಿಕೆಗೆ ಎಡಗೈ ಹೆಬ್ಬೆಟ್ಟಿನ ಗುರುತನ್ನು ಹಾಕಿರುತ್ತಾಳೆ. ಸಾಕ್ಷಿದಾರರು ನಿಪಿ–26 ಮರಣ ಪೂರ್ವ ಹೇಳಿಕೆಯನ್ನು ನೋಡಿ ಸದರಿ ಹೇಳಿಕೆ ಗಾಯಾಳು ಲಕ್ಷ್ಮಿ ತನ್ನ ಸಮಕ್ಷಮ ತಹಶೀಲ್ದಾರ್ ರವರಲ್ಲಿ ನೀಡಿದ ಮರಣ ಪೂರ್ವ ಹೇಳಿಕೆ ಆಗಿರುತ್ತದೆ ಎಂದು ಗುರುತಿಸಿರುತ್ತಾರೆ ಹಾಗೂ ನಿಪಿ–26 ರಲ್ಲಿ ಗಾಯಾಳು ಲಕ್ಷ್ಮಿ ರವರ ಹೆಬ್ಬೆಟ್ಟಿನ ಗುರುತು ಇರುವ ಬಗ್ಗೆ ಸಹ ಗುರುತಿಸಿರುತ್ತಾರೆ. ನಿಪಿ–26 ಗಾಯಾಳುವಿನ ಮರಣ ಪೂರ್ವ ಹೇಳಿಕೆಯನ್ನು ತಹಶೀಲ್ದಾರ್ ರವರು ತಮ್ಮ ಸಮಕ್ಷಮ ಪಡೆದಿರುವ ಬಗ್ಗೆ ತಾನು ತನ್ನ ಸಹಿ ಮಾಡಿರುವುದಾಗಿ ಸಾಕ್ಷಿದಾರರು ಗುರುತಿಸಿರುತ್ತಾರೆ. ನಿಪಿ–26 ಮರಣ ಪೂರ್ವ ಹೇಳಿಕೆ ತಮ್ಮ ಸಮಕ್ಷಮ ದಾಖಲಿಸಲ್ಪಟ್ಟಿತ್ತು ಎಂದು ಸಾಕ್ಷಿದಾರರು ಗುರುತಿಸಿರುವ ಅವರ ಸಹಿಯನ್ನು ನಿಪಿ–26(ಡಿ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ**

ಆರೋಪಿತರ ಪರ ವಕೀಲರು ಪಾಟಿ ಸವಾಲಿಗೆ ಸಮಯ ಕೋರಿದ್ದು ಯಾವುದೇ ಸಕಾರಣ ಇಲ್ಲದ ಕಾರಣ ಕೋರಿಕೆ ನಿರಾಕರಿಸಿ ಪಾಟಿ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ.

2ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್
ನ್ಯಾಯಾಧೀಶರು, ಹಾಸನ.